# ಸಹನೆಯೇ ನನ್ನ ದೊಡ್ಡ ಶಕ್ತಿ ಶ್ರದ್ಧಾ



ನಟನೆಯ ಆಚೆಗೂ ನಮಗೆ ಸಾಮಾಜಿಕ ಜವಾಬ್ದಾರಿಗಳಿವೆ ಎಂದು ನಂಬಿರುವ ಕೆಲವೇ ಕೆಲವು ನಟಿಯರಲ್ಲಿ ಶ್ರದ್ಧಾ ಶ್ರೀನಾಥ್ ಕೂಡ ಒಬ್ಬರು. ಬಣ್ಣದ ಲೋಕದಲ್ಲಿ ಬಡವಾಗಿರುವ ಸ್ತ್ರೀದ್ವನಿಗೆ ವ್ಯಕ್ತಿಯಾಗಿಯೂ, ಪಾತ್ರವಾಗಿಯೂ ಬಲ ತುಂಬುತ್ತಿರುವ ಅವರ ಜೊತೆಗಿನ ಮಾತುಕತೆ ಇಲ್ಲಿದೆ.

■ ಪದ್ಮನಾಭ ಭಟ್

'ನಾನು ಖಾಲಿ ಕೂತುಕೊಳ್ಳುತ್ತೇನೆಯೇ ಹೊರತು, ಇಷ್ಟವಿಲ್ಲದ ಸಿನಿಮಾದಲ್ಲಿ ನಟಿಸಲಾರೆ. ಸಹನೆ ನನ್ನ ದೊಡ್ಡ ಶಕ್ತಿ. ನಾನು ಒಳ್ಳೆಯ ಅವಕಾಶಕ್ಕಾಗಿ ಎಷ್ಟು ಕಾಲ ಬೇಕಾದರೂ ಸಹನೆಯಿಂದ ಕಾಯಬಲ್ಲೆ' ಹೀಗೆಂದು ಸ್ಪಷ್ಟಧ್ವನಿಯಲ್ಲಿ ಹೇಳಿದರು ಶ್ರದ್ಧಾ ಶ್ರೀನಾಥ್. ಸ್ಪಷ್ಟವಾಗಿ ಮಾತಾಡುವುದು ಮತ್ತು ದೃಢವಾಗಿ ಮಾತಾಡುವುದು ಶ್ರದ್ಧಾ ಅವರ ವ್ಯಕ್ತಿತ್ವದ ಬಹುಮುಖ್ಯ ಲಕ್ಷಣಗಳು ಎಂಬುದು ಅವರನ್ನು ಒಂದಿಷ್ಟು ಹತ್ತಿರದಿಂದ ನೋಡಿದ ಎಲ್ಲವರಿಗೂ ಗೊತ್ತಿದೆ. ಹಾಗಾಗಿಯೇ ಅವರಿಗೆ ಚಿತ್ರರಂಗದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯದ ವಿರುದ್ಧ ಸ್ಪಷ್ಟವಾದ ಧ್ವನಿಯಲ್ಲಿ ಮಾತಾಡುವುದು ಸಾಧ್ಯವಾಯ್ತು. ದೊಡ್ಡ ದೊಡ್ಡ ನಟರ ಮೇಲೆ ಆರೋಪಗಳು ಕೇಳಿಬಂದಾಗಲೂ ದೌರ್ಜನ್ಯವನ್ನು ದೃಢವಾಗಿ ವಿರೋಧಿಸುವುದು ಸಾಧ್ಯವಾಯ್ತು. ಅದಕ್ಕಿಂತ ಹೆಚ್ಚಾಗಿ, ಅಷ್ಟು ಗಟ್ಟಿಯಾಗಿ ಮಾತನಾಡಿಯೂ ಚಿತ್ರರಂಗದಲ್ಲಿ ಉಳಿದುಕೊಳ್ಳುವುದು ಸಾಧ್ಯವಾಯ್ತು.

ತಮ್ಮ ನಂಬಿಕೆಯಲ್ಲಿ, ನಿಲುವುಗಳಲ್ಲಿ ಕಿಂಚಿತ್ ಬದಲಾಗಿಲ್ಲವಾದರೂ ಶ್ರದ್ಧಾ ಮಾತಿನಲ್ಲಿ ಆಗೀಗ ತುಸು ದಣಿವೂ ಕಾಣಿಸಿಕೊಳ್ಳುತ್ತದೆ. ಈ ದಣಿವು